## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ

**ಸಿಸಿ ಸಂಖ್ಯೆ 1181/2024**

ಪಿರ್ಯಾದುದಾರರು : ರಾಜ್ಯದ ಪರವಾಗಿ ಚಿಗಟೇರಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು ಶ್ರೀ ಕೊಡತ್ತಿ ನಾಗರಾಜ ಯಾನೆ ನಾಗರಾಜ ತಂದೆ ಲೇಟ್ ಹಾಲಪ್ಪ ವಯಸ್ಸು 54 ವರ್ಷ ವಾಸ ಮುತ್ತಿಗಿ ಗ್ರಾಮ ಹರಪನಹಳ್ಳಿ ತಾಲ್ಲೂಕು

**--::: ಆಪಾದನೆ :::--**

(ಶ್ರೀಮತಿ ಶ್ರೀಮತಿ ಉಷಾರಾಣಿ ಆರ್. ಬಿ.ಎ.ಎಲ್., ಎಲ್ ಎಲ್ ಎಂ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಹರಪನಹಳ್ಳಿ ಆದ ನಾನು ಮೇಲ್ಕಂಡ ಆರೋಪಿಗಳ ಮೇಲೆ ಆರೋಪಣೆ ಹೊರಿಸುವುದೇನೆಂದರೆ.)

ದಿನಾಂಕ 20.06.2024 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಮುತ್ತಿಗಿ ಗ್ರಾಮದ ಶ್ರೀ ದುರುಗಮ್ಮ ದೇವಸ್ಥಾನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರಾದ ನೀವು ಮಟ್ಕಾ ಜೂಜಾಟದ ಬಗ್ಗೆ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಚಾಸಾ-1 ರವರು ಚಾಸಾ-2 ಮತ್ತು ಚಾಸಾ-3 ರವರುಗಳ ಸಮಕ್ಷಮ ಚಾಸಾ-4 ರಿಂದ ಚಾಸಾ-6 ರವರುಗಳೊಂದಿಗೆ ಮದ್ಯಾಹ್ನ 12.45 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಲಾಗಿ ಆರೋಪಿತರಾದ ನೀವು ಸಾರ್ವಜನಿಕರನ್ನು ಉದ್ದೇಶಿಸಿ ಇದು ನಸೀಬಿ ಮಟ್ಕಾ ಜೂಜಾಟ 1 ರೂಪಾಯಿಗೆ 80/- ರೂಪಾಯಿ ಕೊಡುತ್ತೇವೆ 100 ರೂ ಒಳಗಿನ ಯಾವುದಾದಾರೂ ನಂಬರ್ ಬರೆಯಿ ಅದೃಷ್ಟ ಪರೀಕ್ಷಿಸಿಕೊಳ್ಳಿ ಅಂತಾ ಕೂಗಿ ಕರೆಯತ್ತಾ ಸಾರ್ವಜನಿಕರನ್ನು ಪ್ರಚೋದಿಸಿ ಕೂಗಿ ಕರೆಯುತ್ತಿದ್ದವರ ಮೇಲೆ ಮದ್ಯಾಹ್ನ 12.50 ಗಂಟೆಗೆ ದಾಳಿ ಕ್ರಮ ಜರುಗಿಸಿ ಆರೋಪಿತರಾದ ನೀವು ಮಟ್ಕಾ ಜೂಜಾಟದಿಂದ ಸಂಗ್ರಹಿಸಿದ ಒಟ್ಟು

ರೂ.410/- ರೂ ನಗದು ಹಣ ಮತ್ತು ಒಂದು ಬಾಲ್ ಪಾಯಿಂಟ್ ಪೆನ್ ಹಾಗೂ ಮಟ್ಕಾ ನಂಬರ್ ಗಳನ್ನು ಬರೆದ ಒಂದು ಚೀಟಿ ದೊರೆತವುಗಳನ್ನು ವಶಪಡಿಸಿಕೊಂಡಿದ್ದು ಈ ಮೂಲಕ ಆರೋಪಿತರಾದ ನೀವು ಕರ್ನಾಟಕ ಪೋಲಿಸ್ ಕಾಯ್ದೆ ಕಲಂಃ 78(3) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ- ಈಗ ಓದಿ ಹೇಳಿದ ನಿಮ್ಮಗಳ ಮೇಲಿನ ಆರೋಪಣೆ ತಿಳಿಯಿತೇ ?

ಉತ್ತರಃ-

ಪ್ರಶ್ನೆಃ- ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ-

ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿಯು ನೀಡಿದ ನಿಜವಾದ ಹೇಳಿಕೆ ಇರುತ್ತದೆ.

ಸ್ಥಳಃ- ಹರಪನಹಳ್ಳಿ

ದಿನಾಂಕಃ 06.08.2026

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಹರಪನಹಳ್ಳಿ